**ಜ್ಞಾನಿಯು ತನ್ನ ಮನಸ್ಸಿನ ಒಡೆಯನಾಗಿರುತ್ತಾನೆ, ಮೂರ್ಖನು ಅದರ ದಾಸನಾಗಿರುತ್ತಾನೆ.**

- ಪುಬ್ಲಿಯಸ್ ಸೈರಸ್ ( Publius Syrus)

ಪ್ರೇಕ್ಷಕರೆಲ್ಲ ಎದ್ದು ಹೊರಡುತ್ತಿರುವಾಗ ಮುಂದೆ ಕುಳಿತಿದ್ದ ಓರ್ವ ವ್ಯಕ್ತಿಯು ಪರದೆಯನ್ನು ಮುಟ್ಟಿನೋಡಿದನಂತೆ. ಪಕ್ಕದಲ್ಲಿದ್ದವರೊಬ್ಬರು ಕೇಳಿದರು, "ಅಲ್ರೀ ಸ್ವಾಮಿ, ಪರದೆಯನ್ನೇಕೆ ಮುಟ್ಟುತ್ತಿದ್ದೀರಿ?" ಎಂದು. ಆ ವ್ಯಕ್ತಿ ಉದ್ಗರಿಸಿದನಂತೆ, "ಅದೇನು ಮಳೆ ಸುರಿಯಿತು ಸ್ವಾಮಿ! ಇಂತಹ ಮಳೆಯನ್ನು ನಾನು ಈ ಹಿಂದೆ ನೋಡಿಲ್ಲ. ಅಬ್ಬಾ, ಎಷ್ಟೆಲ್ಲ ಅನಾಹುತ ಮಾಡಿತು? ಹೀಗೆ ಅಬ್ಬರಿಸಿ ಸುರಿದ ಮಳೆಯಿಂದ ಪರದೆ ಏನಾದರೂ ಒದ್ದೆಯಾಗಿದೆಯೆ ಎಂದು ಮುಟ್ಟಿನೋಡುತ್ತಿದ್ದೇನೆ." ಹೌದು, ಪರದೆಯ ಮೇಲೆ ಏನೆಲ್ಲ ಘಟನೆಗಳು ನಡೆಯುತ್ತವೆ. ಜಡಿಮಳೆ ಸುರಿಯುತ್ತದೆ ರಕ್ತಪಾತವಾಗುತ್ತದೆ, ಭೂಕುಸಿತವಾಗಿ ಕಟ್ಟಡಗಳು ಬೀಳುತ್ತವೆ, ಅಪಘಾತಗಳಾಗಿ ರಕ್ತದ ಕೋಡಿ ಹರಿಯುತ್ತದೆ—ಆದರೆ ಪರದೆಗೆ ಮಾತ್ರ ಏನೂ ಆಗುವುದಿಲ್ಲ. ಅದು ಸ್ಥಿರವಾಗಿರುತ್ತದೆ. ಅದರಂತೆ ಸ್ಥಿತಪ್ರಜ್ಞನ ಮನಸ್ಸೂ ಕೂಡ. ಆತನ ಜೀವನದಲ್ಲಿ ಏನೇ ಏರುಪೇರುಗಳಾದರೂ ಅವನು ಮಾತ್ರ ನಿರ್ವಿಕಾರ ಚಿತ್ತನಾಗಿರುತ್ತಾನೆ. ಯಾವ ವ್ಯತ್ಯಯಕ್ಕೂ ಅವನ ಮನಸ್ಸು ಅಲುಗಾಡುವುದಿಲ್ಲ. ಆದುದರಿಂದ ನಾವು ನಮ್ಮ ಮನಸ್ಸನ್ನು ಇಂದ್ರಿಯಗಳ ವಿಷಯಗಳಿಂದ ವಿಮುಖಮಾಡಿ, ನಮ್ಮ ವಶದಲ್ಲಿಟ್ಟುಕೊಂಡಿರಬೇಕು.

# ಪ್ರಹಸನ ಪ್ರಸಂಗ

ಪ್ರಾರಂಭದಲ್ಲಿ ಪತಿಪತ್ನಿಯರ ಪ್ರೇಮ ದೈಹಿಕ ಆಕರ್ಷಣೆಯನ್ನು ಹೆಚ್ಚಾಗಿ ಅವಲಂಬಿಸಿರುತ್ತದೆ. ಆದರೆ ಅದು ಕ್ರಮೇಣ ಮಾನವೀಯ ಪ್ರೀತಿಯಾಗಿ ಪರಿವರ್ತನಗೊಳ್ಳಬೇಕು. ಹಾಗಾಗದಿದ್ದರೆ ಕೋಪತಾಪಗಳು ಹೊಗೆಯಾಡಲು ಪ್ರಾರಂಭಿಸಿ ಮನೆಮಂದಿಯೆಲ್ಲ ಕಣ್ಣೀರು ಸುರಿಸುವಂತಾಗುತ್ತದೆ ಮತ್ತು ನೆರೆಯವರಿಗೂ ತೊಂದರೆಯುಂಟಾಗುತ್ತದೆ. ಒಂದು ಹೇಳಿಕೆ ಇದೆ:

ಮದುವೆಯಾದ ಮೊದಲನೆಯ ವರ್ಷ ಪತ್ನಿ ಗಂಡನ ಮಾತನ್ನು ಕೇಳುತ್ತಾಳೆ. ಎರಡನೆಯ ವರ್ಷ ಗಂಡ ಪತ್ನಿಯ ಮಾತನ್ನು ಕೇಳಬೇಕಾಗುತ್ತದೆ. ಮೂರನೆಯ ವರ್ಷ ಅವರಿಬ್ಬರೂ ಜಗಳವಾಡುವುದನ್ನು ನೆರೆಮನೆಯವರು ಕೇಳಬೇಕಾಗುತ್ತದೆ.

**ನಮ್ಮ** ಭಗವತ್‌ಶ್ರದ್ಧೆ ಕೇವಲ ಬಾಯಿ ಮಾತಿನಲ್ಲಿ ಮಾತ್ರ. ಅದು ಹೃತ್ಪೂರ್ವಕವಾಗಿರುವುದಿಲ್ಲ ಮತ್ತು ನಮ್ಮ ದೈನಂದಿನ ಜೀವನ ಆ ಶ್ರದ್ಧೆಯ ಪ್ರಭಾವದಿಂದ ಪ್ರೇರಿತವಾಗಿರುವುದಿಲ್ಲ. ನಮ್ಮ ಪಾಲಿಗೆ ಭಗವಂತನು ಇಲ್ಲವೆಂಬತೆಯೇ ಜೀವಿಸುತ್ತೇವೆ.

ಒಬ್ಬ ನಾಸ್ತಿಕನಿದ್ದ. ಅವನು ದೇವರಿಲ್ಲ ಎಂದು ಎಲ್ಲ ಕಡೆ ಹೇಳಿಕೊಂಡು ತಿರುಗುತ್ತಿದ್ದ. ಇಂತಹ ಸಂದರ್ಭದಲ್ಲಿ ಅವನು ಪರ್ವತಪ್ರದೇಶದಲ್ಲಿ ಹೋಗುತ್ತಿರುವಾಗ ಒಮ್ಮೆ ಕಾಲುಜಾರಿ ಪ್ರಪಾತದ ಕೆಳಗೆ ಉರುಳತೊಡಗಿದ. ದೇವರ ದಯೆಯಿಂದ ಅವನ ಕೈಗೆ ಒಂದು ಮರದ ಕೊಂಬೆ ಸಿಕ್ಕಿತು. ಆ ಮರದ ಕೊಂಬೆಯನ್ನು ಹಿಡಿದುಕೊಂಡು ನೇತಾಡುತ್ತಿದ್ದ. ಕೊಂಬೆಯೂ ಮುರಿದು ಬೀಳುವುದರಲ್ಲಿತ್ತು. ಬಿದ್ದರೆ ಅವನ ಪ್ರಾಣ ಉಳಿಯುತ್ತಿರಲಿಲ್ಲ.

ಈಗ ಅವನು ಹತಾಶನಾಗಿದ್ದಾನೆ. ಏನು ಮಾಡಬೇಕೆಂದು ತೋಚಲಿಲ್ಲ. ನಿರ್ಜನ ಪ್ರದೇಶ. ಎಷ್ಟೇ ಕೂಗಿದರೂ ಯಾರ ಸುಳಿವೂ ಇಲ್ಲ. ಈಗ ದೇವರೇ ಗತಿ. "ದೇವರೇ, ನನ್ನನ್ನು ಕಾಪಾಡು" ಎಂದು ಕೂಗಿ ಕರೆದ. ಸದ್ದೇ ಇಲ್ಲ. ಮತ್ತೆ ಮತ್ತೆ ಕರೆಯತೊಡಗಿದ. "ದೇವರೇ, ನೀನಿರುವುದು ನಿಜವಾದರೆ ನನ್ನನ್ನು ಬಂದು ಕಾಪಾಡು. ನಾನು ಇನ್ನು ನಿನ್ನನ್ನು ನಂಬುತ್ತೇನೆ."

ದಿವ್ಯವಾಣಿ ಕೇಳಿಸಿತು : "ಸಂಕಟದಲ್ಲಿ ಇರುವಾಗ ಎಲ್ಲರೂ ಹೀಗೇ ಹೇಳುತ್ತಾರೆ. ನನಗೆ ನಿನ್ನ ಮಾತಿನಲ್ಲಿ ಭರವಸೆಯಿಲ್ಲ."

ಈ ವಾಣಿಯನ್ನು ಕೇಳಿ ಆ ನಾಸ್ತಿಕನಿಗೆ ಸ್ವಲ್ಪ ಭರವಸೆ ಉಂಟಾಯಿತು. ಅವನು ಉತ್ಸಾಹದಿಂದ ಹೇಳತೊಡಗಿದ : "ಇಲ್ಲ, ಇಲ್ಲ, ದೇವರೆ. ಖಂಡಿತ ನಾನು ನಿನಗೆ ಮೋಸ ಮಾಡುವುದಿಲ್ಲ. ಕೊಟ್ಟ ಮಾತಿಗೆ ತಪ್ಪುವುದಿಲ್ಲ. ನನ್ನನ್ನು ಕಾಪಾಡು. ಇಡೀ ಜಗತ್ತಿಗೇ ನಿನ್ನ ಮಹಿಮೆಯನ್ನು ಸಾರುತ್ತೇನೆ." "ಆಗಲಿ, ನಾನು ನಿನ್ನನ್ನು ಕಾಪಾಡುತ್ತೇನೆ. ನೀನು ಹಿಡಿದಿರುವ ಕೊಂಬೆಯನ್ನು ಬಿಡು" ದೇವರು ಹೇಳಿದ. "ಏನು, ಕೊಂಬೆಯನ್ನು ಬಿಡಬೇಕೆ? ಬಿಟ್ಟರೆ ನನ್ನ ಗತಿ ಏನು? ನಾನೇನು ಹುಚ್ಚನೇ?" ನಾಸ್ತಿಕನು ಹತಾಶನಾಗಿ ನುಡಿದ.


**ಆಶ್ರಮದ ವಿಶೇಷ ಕಾರ್ಯಕ್ರಮಗಳು**

**ಫೆಬ್ರವರಿ 2002**

| | | |
|---|---|---|
| 4 | ಸೋಮವಾರ | ಸ್ವಾಮಿ ವಿವೇಕಾನಂದ ಜಯಂತಿ |
| 14 | ಗುರುವಾರ | ಸ್ವಾಮಿ ಬ್ರಹ್ಮಾನಂದ ಜಯಂತಿ |
| 16 | ಶನಿವಾರ | ಸ್ವಾಮಿ ತ್ರಿಗುಣಾತೀತಾನಂದ ಜಯಂತಿ |
| 27 | ಬುಧವಾರ | ಸ್ವಾಮಿ ಅದ್ಭುತಾನಂದ ಜಯಂತಿ |

ಪ್ರತಿ ಗುರುವಾರ ಮತ್ತು ಭಾನುವಾರ ಕನ್ನಡದಲ್ಲಿಯೂ ಪ್ರತಿ ಶನಿವಾರ ಇಂಗ್ಲಿಷಿನಲ್ಲಿಯೂ ಸಂಜೆ 6 ರಿಂದ 7 ರವರೆಗೆ ಆಧ್ಯಾತ್ಮಿಕ ಪ್ರವಚನಗಳು ಇರುತ್ತವೆ.

ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ